ಠಾಣೆಗಳು ಮತ್ತು 8 ಸಂಚಾರಿ ಪೊಲೀಸ್ ಠಾಣೆಗಳಿವೆ. ಚಾಮರಾಜನಗರ ಹಳೆಯ ಹೊಸ ಜಿಲ್ಲೆ. ಅಂದರೆ, 13 ವರ್ಷದ ಹಿಂದೆ ಆದಂಥ ಹೊಸ ಜಿಲ್ಲೆ. ಇಲ್ಲಿ ಸಂಚಾರಿ ಪೊಲೀಸ್ ಠಾಣೆಯಿಲ್ಲ. ಅದೇ ರೀತಿ ಹಾವೇರಿ ಮತ್ತು ಕೊಪ್ಪಳ, ಈ ಮೂರು ಜಿಲ್ಲೆಗಳಲ್ಲೂ ಇಲ್ಲ. ಅಲ್ಲಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದರೊಂದಿಗೆ, ತೀರಾ ಇತ್ತೀಚೆಗೆ ಹೊಸದಾಗಿ ರಚನೆಯಾದ ಯಾದಗೀರ್ ಜಿಲ್ಲೆ ಮತ್ತು ರಾಯಚೂರಿನ ಸಿಂಧನೂರಿನಲ್ಲಿಯೂ ಒಂದೊಂದು ಮಾಡಬೇಕೆಂದಿದ್ದೇವೆ. 25 ಪೊಲೀಸ್ ಸ್ಟೇಷನ್‌ಗಳಲ್ಲಿ ಈ 5 ಸಂಚಾರಿ ಪೊಲೀಸ್ ಸ್ಟೇಷನ್‌ಗಳು ಅತಿ ಅಗತ್ಯವೆಂದು ತೀರ್ಮಾನಿಸಿ, ಅವುಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಬೇಗೊರು ಹೋಬಳಿ, ಬೇಗೂರು ನಗರದಲ್ಲಿ ಬೇಕು ಎಂದು ತಾವು ಕೇಳಿದ್ದೀರಿ. ಈ ವರ್ಷದಲ್ಲಿ ಅದನ್ನು ಮಾಡುವ ಬಗ್ಗೆ ಎಲ್ಲ ಕ್ರಮ ತೆಗೆದುಕೊಳ್ಳುತ್ತೇವೆ. ನೀವು ಹೇಳಿದಂಥ ಕೆಲವು ಕಾರಣಗಳಿಗೋಸ್ಕರ ಅಂದರೆ ಹೆಚ್ಚು ಇರುವ ಕಾಡು, ಕೇರಳದ ಗಡಿ, ಇನ್ನಿತರ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ ಹಿನ್ನೆಲೆಯಲ್ಲಿ, ಈ ಜಿಲ್ಲೆಗೆ ಧರ್ಮವೀರ ಆಯೋಗದ ಅರ್ಹತೆಗಳಾದ, ಜನಸಂಖ್ಯೆ, ಪ್ರದೇಶ ಇವೆಲ್ಲ ಪೂರ್ತಿ ಇಲ್ಲದಿದ್ದರೂ, ಇದನ್ನು ನಾವು ಆದ್ಯತೆ ಮೇಲೆ ಪರಿಗಣಿಸಬೇಕು, ಈ ವರ್ಷ ಮಾರ್ಚ್ 31ರೊಳಗೆ ಮಾಡಬೇಕು ಎನ್ನುವ ಯೋಜನೆ ಇದೆ. ಹೊಸ ಪೊಲೀಸ್ ಸ್ಟೇಷನ್‌ಗಳಿಗೆ ಈಗಾಗಲೇ 4 ಕೋಟಿ, 6 ಲಕ್ಷ ರೂಪಾಯಿಗಳನ್ನು non-plan expenditure ನಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ plan expenditure ನಲ್ಲಿ ಗಮನ ಕೊಟ್ಟು, ಎಷ್ಟು ಹಣ ಸಿಗುತ್ತದೆ ಎನ್ನುವುದನ್ನು ತಿಳಿದುಕೊಂಡು, supplementary budget ನಲ್ಲಿ ಎಷ್ಟು ಬರುತ್ತದೆ ಎನ್ನುವುದನ್ನು ನೋಡಿಕೊಂಡು ಖಂಡಿತವಾಗಿ, ಗುಂಡ್ಲುಪೇಟೆಯ ಬೇಗೂರಿನ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮುಜರಾಯಿ ಇಲಾಖೆಯಲ್ಲಿ ಸಾಕಷ್ಟು ಹಣ ಬಿಡುಗಡೆಯಾಗುತ್ತಿದೆ. ಪೊಲೀಸ್ ಇಲಾಖೆ ಬಹಳ ಅವಶ್ಯಕವಿರುವಂಥಹುದು. ಹಣದ ಲಭ್ಯತೆಯನ್ನು ನೋಡಿ ಮಾಡುತ್ತೇವೆ ಎನ್ನುವುದನ್ನು ಹೇಳದೇ, ಪೊಲೀಸ್ ಇಲಾಖೆಯನ್ನು ಬಲಪಡಿಸುವ ದೃಷ್ಟಿಯಿಂದ ಉದಾರವಾಗಿ ಒಂದಷ್ಟು ಹಣವನ್ನು ತಾವು ಮುಖ್ಯಮಂತ್ರಿಗಳಿಂದ ಪಡೆದುಕೊಂಡು ಇಲಾಖೆಯನ್ನು strengthen ಮಾಡುವ ಪ್ರಯತ್ನವನ್ನು ಮಾಡಿ ಎಂದು ತಮ್ಮ ಮೂಲಕ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಡಾ: ವಿ.ಎಸ್. ಆಚಾರ್ಯ: ತಮ್ಮ ಮಾಹಿತಿಗೋಸ್ಕರ ಹೇಳುತ್ತಿದ್ದೇನೆ. ಕಳೆದ 10 ವರ್ಷಗಳ ಅವಧಿಯಲ್ಲಿ, ಯಾವುದಾದರೂ ಒಂದು ವರ್ಷದಲ್ಲಿ ನಮ್ಮ ಗೃಹ ಖಾತೆಗೆ ಅತಿ ಹೆಚ್ಚು ಹಣವನ್ನು ಕೊಟ್ಟಿದ್ದಾರೆ ಎಂದರೆ ಅದು 2010–11ರಲ್ಲಿ. ಈ ವರ್ಷದಲ್ಲಿ 253 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಅದರ ಸದ್ವಿನಿಯೋಗ ಆಗುವುದಕ್ಕೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ತಾವು ಕೇಳಿರುವುದು ಮಾರ್ಚ್ 31ರೊಳಗೆ ಆಗುವ ಹಾಗೆ ನಾವು ಪ್ರಯತ್ನ ಮಾಡುತ್ತೇವೆ.

ಮೋನೋ ಮತ್ತು ಮೆಟ್ರೋ ರೈಲು ಯೋಜನೆಯ ಬಗ್ಗೆ

105 (299) ಶ್ರೀ ಕೆ. ಜೆ. ಜಾರ್ಜ್ (ಸರ್ವಜ್ಞನಗರ) :– ಮಾನ್ಯ ಮುಖ್ಯ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಮೊನೋ ರೈಲ್ ಹಾಗೂ ಮೆಟ್ರೋ ರೈಲ್ ಯೋಜನೆಯ ನಕಾಶೆ ಮತ್ತು ಯಾವ ಯಾವ ಮಾರ್ಗದಲ್ಲಿ ಹಾದು ಹೋಗುತ್ತದೆ? (ವಿವರ ನೀಡುವುದು):

ಆ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಹೆಣ್ಣೂರು, ನಾಗವಾರ, ಕಾಚರಕನಹಳ್ಳಿ, ಡಿ.ಜೆ.ಹಳ್ಳಿ, ಬಾಣಸವಾಡಿ, ಬೈಯಪ್ಪನಹಳ್ಳಿ, ಎಂ.ಎಸ್.ನಗರದ ಪ್ರದೇಶಗಳಲ್ಲಿ ಅತೀ ಹೆಚ್ಚಿನ ಕಾರ್ಮಿಕ ವರ್ಗ ಇರುವುದರಿಂದ ಈ ಪ್ರದೇಶದ ವ್ಯಾಪ್ತಿಯಲ್ಲಿ ಮೊನೋ ರೈಲ್ ಹಾದು ಹೋಗುತ್ತದೆಯೇ ?

ಇ) ಹಾಗಿಲ್ಲದಿದ್ದಲ್ಲಿ, ಮೊನೋ ರೈಲ್ ಮಾರ್ಗವನ್ನು ಬೈಯಪ್ಪನಹಳ್ಳಿಯ ಮೆಟ್ರೋ ನಿಲ್ದಾಣಕ್ಕೆ ಸಂಪರ್ಕ ನೀಡಲು ಯೋಜನೆ ಇದೆಯೇ, ಇಲ್ಲವಾದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ವಿವರ ನೀಡುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :–

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ 42.3 ಕಿ.ಮೀಗಳ ಮೊದಲ ಹಂತದ ನಕಾಶೆಯನ್ನು ಲಗತ್ತಿಸಿದೆ. ಸದರಿ ನಕಾಶೆಯಲ್ಲಿ ಕಾಣಿಸಿದಂತೆ, ಮೆಟ್ರೋ ರೈಲು ಹಾದು ಹೋಗುವ ಮಾರ್ಗದ ವಿವರ ಕೆಳಗಿನಂತಿದೆ:

ಪೂರ್ವ–ಪಶ್ಚಿಮ ಮಾರ್ಗ:

ಬೈಯಪ್ಪನಹಳ್ಳಿಯಿಂದ ಮೆಜೆಸ್ಟಿಕ್ ನಿಲ್ದಾಣದ ವರೆಗೆ:

ಬೈಯಪ್ಪನಹಳ್ಳಿ ಹಳೆ ಮದ್ರಾಸ್ ರಸ್ತೆ, ಸಿ.ಎಂ.ಹೆಚ್.ರಸ್ತೆ, ಹಲಸೂರು, ಟ್ರಿನಿಟಿ ಸರ್ಕಲ್, ಎಂ.ಜಿ.ರಸ್ತೆ, ಕ್ರಿಕೆಟ್ ಸ್ಟೇಡಿಯಂ, ವಿಧಾನಸೌಧ, ಸೆಂಟ್ರಲ್ ಕಾಲೇಜ್, ಮೆಜೆಸ್ಟಿಕ್, ಸಿಟಿ ರೈಲ್ವೆ ಸ್ಟೇಷನ್, ಮಾಗಡಿ ರಸ್ತೆ, ಟೋಲ್ಗೇಟ್, ಹೊಸಹಳ್ಳಿ, ವಿಜಯನಗರ, ದೀಪಾಂಜಲಿ ನಗರ, ಮೈಸೂರು ರಸ್ತೆ ಟರ್ಮಿನಲ್.

ಉತ್ತರ–ದಕ್ಷಿಣ ಮಾರ್ಗ:

ಹೆಸರಘಟ್ಟ ಕ್ರಾಸ್, ಟಿ.ದಾಸರಹಳ್ಳಿ, ಜಾಲಹಳ್ಳಿ, ಪೀಣ್ಯ ಕೈಗಾರಿಕಾ ಪ್ರದೇಶ, ಪೀಣ್ಯ ವಿಲೇಜ್, ಹೊರ ವರ್ತುಲ ರಸ್ತೆ, ಯಶವಂತಪುರ, ಸೋಪ್ ಫ್ಯಾಕ್ಟರಿ, ಮಹಾಲಕ್ಷ್ಮಿ

ಲೇಔಟ್, ರಾಜಾಜಿನಗರ, ಕುವೆಂಪು ರಸ್ತೆ, ಮಲ್ಲೇಶ್ವರಂ, ಸ್ವಸ್ತಿಕ್, ಮೆಜೆಸ್ಟಿಕ್, ಚಿಕ್ಕಪೇಟೆ, ಸಿಟಿ ಮಾರ್ಕೆಟ ರಸ್ತೆ, ಲಾಲ್‌ಬಾಗ್, ಸೌತ್‌ಎಂಡ್, ಸರ್ಕಲ್, ಜಯನಗರ, ಆರ್.ವಿ.ರಸ್ತೆ, ಬನಶಂಕರಿ ದೇವಸ್ಥಾನ, ಜೆ.ಪಿ.ನಗರ, ಪುಟ್ಟೇನಹಳ್ಳಿ ಕ್ರಾಸ್.

ಮೊನೋ ರೈಲು ಯೋಜನೆಯ ನಕಾಶೆಯಲ್ಲಿ ಕಾಣಿಸಿದಂತೆ ಹಾದು ಹೋಗುವ ವಿವರ ಕೆಳಗಿನಂತಿದೆ:

ಕಾರಿಡಾರ್	ಕಾರಿಡಾರ್ ಹೆಸರು	ದೂರ (ಕಿ.ಮೀ.ನಲ್ಲಿ)
ಕಾರಿಡಾರ್–1	ಜೆ.ಪಿ.ನಗರ ದಿಂದ ಹೆಬ್ಬಾಳ:–	
	ಗಣಪತಿ ದೇವಸ್ಥಾನದಿಂದ ಪ್ರಾರಂಭಿಸಿ ಬನ್ನೇರುಘಟ್ಟ ರಸ್ತೆ ಹಾದು ಹೊರವಲಯ ವರ್ತುಲ ರಸ್ತೆ ಮೂಲಕ ಕನಕಪುರ ರಸ್ತೆ ಇಂದ ಮೈಸೂರು ರಸ್ತೆಗೆ ಕತ್ರಿಗುಪ್ಪೆ ಮೂಲಕ ಮೈಸೂರು ರಸ್ತೆ.	31
ಕಾರಿಡಾರ್–2	ಫೆರಿಫೆರಲ್ ರಿಂಗ್‌ರೋಡ್‌ನಿಂದ ಮಾಗಡಿ ರೋಡ್ ಟೋಲ್ ಗೇಟ್‌ವರೆಗೆ– ಮಾಗಡಿ ರೋಡ್ ಟೋಲ್‌ಗೇಟ್‌ನಿಂದ ಮಾಗಡಿ ರೋಡ್‌ನಲ್ಲಿ 09 ಕಿ.ಮೀ ಚಲಿಸಿ ಫೆರಿಫೆರಲ್–ರಿಂಗ್ ರೋಡ್ ಸಂದಿಸುವವರೆಗೆ	09

ಆ) ಇಲ್ಲ.

ಇ) ಯಾವುದೇ ಪ್ರಸ್ತಾವನೆ ಇಲ್ಲ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ನನ್ನ (ಆ) ಮತ್ತು (ಇ) ಪ್ರಶ್ನೆಗಳಿಗೆ ಯಾವುದೇ ಪ್ರಸ್ತಾವನೆ ಇಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮೆಟ್ರೋ ರೈಲಿನ trunk line ಬೈಯಪ್ಪನಹಳ್ಳಿಗೆ ಬರುತ್ತಿದೆ. ಬೈಯಪ್ಪನಹಳ್ಳಿಯ ಪಕ್ಕದಲ್ಲಿ ನನ್ನ ಕ್ಷೇತ್ರವಿದೆ. ಬಾಣಸವಾಡಿ, ಕಮ್ಮನಹಳ್ಳಿ, ಕಾಚರಕನಹಳ್ಳಿ, ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಈ ಪ್ರದೇಶಗಳಿಗೆ ಮೆಟ್ರೋ ರೈಲಿನ ಸಂಪರ್ಕಕ್ಕಾಗಿ ಮೋನು ರೈಲು ಕೊಡಿ ಎಂದು ಕೇಳುತ್ತಿದ್ದೇನೆ. ಈಗ ಹೆಬ್ಬಾಳದವರೆಗೆ ಮೋನೋ ರೈಲು ಬರುತ್ತದೆ. ಆ ಲಿಂಕ್ ಅನ್ನು ದಯವಿಟ್ಟು ಬೈಯಪ್ಪನಹಳ್ಳಿಗೆ ಕೊಟ್ಟರೆ ಸುಮಾರು 10–15 ಲಕ್ಷ ಜನರಿಗೆ ಅನುಕೂಲವಾಗುತ್ತದೆ. ಆದ್ದರಿಂದ, ತಾವು ದಯವಿಟ್ಟು ಈ ವಿಚಾರವನ್ನು ಪರಿಶೀಲನೆ ಮಾಡಿ, ಮೋನೋ ರೈಲನ್ನು ಹೆಬ್ಬಾಳದಿಂದ ಬೈಯಪ್ಪನಹಳ್ಳಿಯವರೆಗೆ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಸದಸ್ಯರಾದ ಕೆ.ಜೆ. ಜಾರ್ಜ್‌ರವರು ಬಹಳ

ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನೀವು ಹೇಳಿದಂಥ ಪ್ರದೇಶದಲ್ಲಿ traffic survey ಮಾಡಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈಗ ಹಾಲಿ ನಾವು ಮೋನೋ ರೈಲನ್ನು Hebbal to J.P. Nagar along with western portion of outer ring road-31 k.m., Peripheral Ring Road to Magadi Road toll gate-9 k.m. ಮಾಡುತ್ತಿದ್ದೇವೆ. ನೀವು ಹೇಳಿದುದನ್ನು ಪರಿಶೀಲನೆ ಮಾಡುತ್ತೇವೆ. ಅತ್ಯಂತ ಸಂತೋಷದಿಂದ ಈ ಮನೆಗೆ ಒಂದು ಭರವಸೆ ಕೊಡುವುದೇನೆಂದರೆ, ಈ ಜುಲೈ ಅಂತ್ಯಕ್ಕೆ ಮೋನೋ ರೈಲಿಗೆ ಸಂಬಂಧಪಟ್ಟ D.P.R. ಮುಗಿಯುತ್ತದೆ. ಸೆಪ್ಟೆಂಬರ್ ಒಳಗೆ ಟೆಂಡರ್ ಪ್ರಕ್ರಿಯೆ ಮುಗಿಯುತ್ತದೆ. ನಿಮ್ಮೆಲ್ಲರ ಸಹಕಾರವಿದ್ದರೆ, ಜನವರಿಯಲ್ಲೇ ಕೆಲಸ ಪ್ರಾರಂಭ ಮಾಡಿಸಿ, ನಮ್ಮ ಉಳಿದ ಮೂರು ವರ್ಷಗಳ ಅವಧಿಯೊಳಗಾಗಿಯೇ ಮೋನೋ ರೈಲು ಬೆಂಗಳೂರಿನಲ್ಲಿ ಓಡಾಡಿ, ಸಾರ್ವಜನಿಕರ traffic ತೊಂದರೆಯನ್ನು ಪರಿಹರಿಸುತ್ತದೆ ಎಂದು ಭಾವಿಸಿದ್ದೇನೆ. ಒಂದು ಕಡೆ ಮೆಟ್ರೋ, ಇನ್ನೊಂದು ಕಡೆ ಮೋನೋ ರೈಲುಗಳು ಓಡಾಡುತ್ತವೆ. ಇದರ ಬಗ್ಗೆ ನಮ್ಮ ಸರ್ಕಾರ ಆದ್ಯತೆ ಮೇಲೆ ಕೆಲಸ ಮಾಡುತ್ತಿದೆ. At any cost, ಜನವರಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿಸುವುದಕ್ಕೆ ನಾವು ಪ್ರಯತ್ನ ಮಾಡುವವರಿದ್ದೇವೆ. ಆ ಸಂದರ್ಭದಲ್ಲಿ, ಈಗ ತೀರ್ಮಾನವಾಗಿರುವ, D.P.R. ಮಾಡಿಸುತ್ತಿರುವ 40 ಕಿ.ಮೀ. ಮುಗಿದ ಮೇಲೆ, ನೀವು ಹೇಳಿದ ಸ್ಥಳದ ಜನಸಂದಣಿ, ಅದರ ಅನುಕೂಲತೆಗಳು, ಹಣಕಾಸಿನ ಪರಿಸ್ಥಿತಿ ಎಲ್ಲವನ್ನೂ ನೋಡಿಕೊಂಡು ಮಾಡುತ್ತೇವೆ. ಹಂತಹಂತವಾಗಿ ಇಡೀ ಬೆಂಗಳೂರಿಗೇ ಮೆಟ್ರೋ ಮತ್ತು ಮೋನೋ ರೈಲುಗಳು ಬೇಕೇ ಬೇಕು, ಅದರ ಬಗ್ಗೆ ಎರಡು ಮಾತಿಲ್ಲ. ಪ್ರಾರಂಭಿಕ ಹಂತದಲ್ಲಿ ಈ 40 ಕಿ.ಮಿ. ತೆಗೆದುಕೊಂಡಿದ್ದೇವೆ. ನೀವು ಹೇಳಿದುದನ್ನು ನಾನು traffic survey ಮಾಡಿಸಿ, ನಾನು ನಿಮ್ಮನ್ನು ಸಂಪರ್ಕ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಇಡೀ ಪ್ರಪಂಚದಲ್ಲಿ ಎಲ್ಲ ಕಡೆಯೂ ಮೆಟ್ರೋ ರೈಲು main line ಆಗಿರುತ್ತದೆ, ಮೋನೋ ರೈಲು ಅದಕ್ಕೆ feeder line ಆಗಿರುತ್ತದೆ. ಮೆಟ್ರೋ ಸ್ಟೇಷನ್ ಗಳಿಗೆ ಮೋನೋ ರೈಲುಗಳಿಂದ ಜನರು ಹೋಗಬೇಕು ಮತ್ತು ಅದೇ ರೀತಿ ಅವರು ತಮ್ಮ ಮನೆಗಳಿಗೆ ವಾಪಸ್ಸು ಬರಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ಈಗ ತಾವು ಮೋನೋ ರೈಲನ್ನು ಹೆಬ್ಬಾಳದವರೆಗೆ ಮಾಡುತ್ತೀರಿ, ಅದನ್ನು ಇನ್ನೂ 5 ಕಿ.ಮೀ. ವಿಸ್ತರಣೆ ಮಾಡಿದರೆ ಸುಮಾರು 10–15ಲಕ್ಷ ಜನರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇನ್ನು first Phase ನಲ್ಲೆ ಆಗುವಂತೆ ಆದಷ್ಟು ಬೇಗ

ಇದರ feasibility ಯನ್ನು study ಮಾಡಿಸಬೇಕು. ಈ ಬಗ್ಗೆ ದಯವಿಟ್ಟು ತಮ್ಮ ಅಧಿಕಾರಿಗಳಿಗೆ ಆದೇಶ ಕೊಡಿ, ನಮ್ಮನ್ನೂ consult ಮಾಡಲು ಹೇಳಿ. ಅವರು ಬಂದು spot inspection ಮಾಡಿದರೆ feasiblity ಗೊತ್ತಾಗುತ್ತದೆ. ತಾವು busy ಆಗಿರುತ್ತೀರಿ. ಆದ್ದರಿಂದ ತಾವು ದಯವಿಟ್ಟು ಅಧಿಕಾರಿಗಳಿಗೆ ಹೇಳಬೇಕು. ನಾವೂ ಅವರೊಂದಿಗೆ ಚರ್ಚೆ ಮಾಡುತ್ತೇವೆ. ನಮ್ಮ ಸಲಹೆ feasible ಆಗಿದ್ದರೆ ಅವರು ತೆಗೆದುಕೊಳ್ಳಲಿ. ಆ ರೀತಿ ಕೆಲಸ ಮಾಡಿ ಎಂದು ಆದೇಶ ಕೋಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈಗಾಗಲೇ ಉತ್ತರ ಹೇಳಿದ್ದೇನೆ. Traffic ಸ್ಥಿತಿಯನ್ನು ನೋಡಿಕೊಂಡು ಹಂತಹಂತವಾಗಿ ಮಾಡೋಣ ಎಂದು ಹೇಳಿದ್ದೇನೆ. ಮೊದಲು ಈಗ ತೀರ್ಮಾನಿಸಿರುವ 40 ಕಿ.ಮೀ. ಅನ್ನು ಪೂರ್ಣ ಮಾಡುವುದಕ್ಕೆ ಏನೇನು ಮಾಡಬೇಕೋ ಅದಕ್ಕೆ ಎಲ್ಲ ರೀತಿಯ ಪ್ರಯತ್ನ ಮಾಡೋಣ ಮೊದಲು 4 ಕಿ.ಮೀ. ಅನ್ನು ಪೂರ್ಣ ಮಾಡುವುದಕ್ಕೆ ಏನೇನು ಬೇಕೋ ಎಲ್ಲಾ ಪ್ರಯತ್ನ ಮಾಡೋಣ. ನಂತರ ಇದನ್ನು ಸಹ ಪರಿಗಣನೆ ಮಾಡುತ್ತೇನೆ. ಕೇವಲ ಈ ಭಾಗ ಮಾತ್ರವಲ್ಲ, ಬೆಂಗಳೂರಿನ ಬಹುತೇಕ ಎಲ್ಲಾ ಭಾಗದಲ್ಲಿ ಮೆಟ್ರೋ ಅಥವಾ ಮೋನೋ ರೈಲು ಓಡಾಡಬೇಕೆನ್ನುವುದು ನನ್ನ ಅಪೇಕ್ಷೆಯಾಗಿದೆ. ನಿಮ್ಮಂಥ ಸಲಹೆ ಸೂಚನೆಗಳನ್ನು ನೀಡುವವರು ಅನೇಕರು ಇದ್ದಾರೆ. ನಾನು ಇದನ್ನು ಆಗುವುದಿಲ್ಲವೆಂದು ಹೇಳುತ್ತಿಲ್ಲ. ಆಗುವುದಿಲ್ಲವೆಂದು ಎಂದು ಖಂಡಿತಾ ಹೇಳುತ್ತಿಲ್ಲ. ನಾನು ಇದನ್ನು ಪರಿಶೀಲನೆ ಮಾಡಿ, ಅಗತ್ಯವಿದ್ದರೆ ನಿಮ್ಮನ್ನೂ ಕರೆಸಿಕೊಳ್ಳುತ್ತೇನೆ. ಆ ಪಕ್ಷ ಈ ಪಕ್ಷ ಸದಸ್ಯರೆನ್ನುವ ಭೇದಭಾವ ನನಗಿಲ್ಲ. ಇಡೀ ಬೆಂಗಳೂರು ಮಹಾನಗರ ಇಡೀ ವಿಶ್ವದ ಗಮನ ಸೆಳೆಯುತ್ತಿದೆ. ಮೊನ್ನೆ ತಾನೆ Global investors meet ಆಗಿದೆ. ಇವತ್ತು ಸಹ ಸುಮಾರು 500 ಕೋಟಿ ರೂಪಾಯಿಗಳಷ್ಟು ivest ಮಾಡುವಂಥ ದೊಡ್ಡ ಕಂಪನಿಯವರು ಬಂದು ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿ ಹೋದರು. ಅದ್ದರಿಂದ ಬೆಂಗಳೂರಿಗೆ ಅಗತ್ಯವಿರುವ ಎಲ್ಲಾ ಸವಲತ್ತು ಒದಗಿಸಬೇಕು Metro, Mono, High Speed Rail ಇವೆಲ್ಲವುಗಳ ಅಗತ್ಯತೆ ಇದೆ. ನಾನು ಆ ಬಗ್ಗೆ ಗಮನ ಕೊಡುತ್ತೇನೆ. ನಾನು ನಿಮ್ಮ ಜೊತೆ ಮಾತನಾಡುತ್ತೇನೆ.

ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ

74 (125) ಶ್ರೀ ಎಸ್.ಆರ್. ಮಹೇಶ್ (ಕೃಷ್ಣರಾಜನಗರ) :– ಮಾನ್ಯ ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ನಗರವು ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳು ತಮ್ಮ